ಶಾಲಿನಿ ಟ್ಯಾಕ್ಸಿಯಲ್ಲಿ ಹೊರಟರು.

ಅಶೋಕ ಕೆ.ಆರ್. ಆಸ್ಪತ್ರೆಯಲ್ಲಿ ಡಾಕ್ಟರ್. ಜನರಲ್ ಸರ್ಜರಿಯಲ್ಲಿ ಎಂ.ಎಸ್. ಮಾಡಿದ್ದ. ಅವನ ಹೆಂಡತಿ ಅನುಪಮಾ ಮದುವೆಗೆ ಮೊದಲು ಬೆಂಗಳೂರಿನ ಕಲ್ಪವೃಕ್ಷ ಫೈನಾನ್ಸ್ ಕಾರ್ಪೊರೇಷನ್‌ನಲ್ಲಿ ಟೈಪಿಸ್ಟ್ ಆಗಿದ್ದಳು. ಅಶೋಕ್‌ಗೆ ಕೆಲಸದಲ್ಲಿರುವ ಹೆಂಡತಿ ಬೇಕಿರಲಿಲ್ಲ. ಮದುವೆಯ ನಂತರ ಅನುಪಮಾ ಮನೆ ನೋಡಿಕೊಂಡು ಆರಾಮವಾಗಿದ್ದಳು. ಅವರಿಗೆ ಇಬ್ಬರು ಹೆಣ್ಣುಮಕ್ಕಳಿದ್ದರು. ಅನಘಾ ನಾಲ್ಕನೇ ತರಗತಿಯಲ್ಲಿದ್ದಳು, ಅವಳ ಅಕ್ಕ ಅಮೋಘ ಏಳನೇ ತರಗತಿಯಲ್ಲಿದ್ದಳು.

ಅಚ್ಯುತ ದಾವಣಗೆರೆಯ ಎಸ್.ಬಿ.ಐ.ನಲ್ಲಿದ್ದ. ಶಾಲಿನಿ ಮೈಸೂರಿನ ಖಾಸಗಿ ಕಾಲೇಜೊಂದರಲ್ಲಿ ಲೆಕ್ಚರರ್ ಆಗಿದ್ದಳು. ಮಿತಭಾಷಿ. ಗಂಡ ದಾವಣಗೆರೆಯಲ್ಲಿರುವುದು ಬೇಸರ ತಂದಿತ್ತು. ಅವನು ಮೈಸೂರಿಗೆ ವರ್ಗ ಮಾಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ.

ಗಿರಿಜಮ್ಮ–ಸುಬ್ಬರಾಯರು ದಂಪತಿಗಳಿಗೆ ಒಬ್ಬಳೇ ಮಗಳು ಅಪೂರ್ವ. ಹೋಂ ಸೈನ್ಸ್‌ನಲ್ಲಿ ಬಿ.ಎಸ್ಸಿ. ಮಾಡಿದ್ದಳು. ಅಮ್ಮನ ಮುದ್ದಿನ ಮಗಳಾದ ಪೂರ್ವಿ ಮನೆಯಲ್ಲಿ ಒಂದು ಕೆಲಸ ಮಾಡುತ್ತಿರಲಿಲ್ಲ. ಹೊರಗೆ ಕೆಲಸ ಮಾಡಲು ಇಷ್ಟವಿರಲಿಲ್ಲ. ಗಿರಿಜಮ್ಮ ತಮ್ಮ ಮಗಳಿಗೆ ಅಪರೂಪದ ಅಳಿಯನನ್ನು ಹುಡುಕುತ್ತಿದ್ದರು. ಪೂರ್ವಿ ಪ್ರತಿ ಹುಡುಗನಲ್ಲೂ ತಪ್ಪು ತೆಗೆಯುತ್ತಿದ್ದಳು. ಅಣ್ಣ–ಅತ್ತಿಗೆ ಯಾರ ಮಾತಿಗೂ ಬೆಲೆ ಕೊಡುತ್ತಿರಲಿಲ್ಲ.

ಶಾಲಿನಿಯ ಮದುವೆ ಸಮಯದಲ್ಲಿ ಆಕೆಯ ತಮ್ಮ ಶಶಾಂಕ್ ಗಿರಿಜಮ್ಮನ ಕಣ್ಣಿಗೆ ಬಿದ್ದಿದ್ದ. ಡಾಕ್ಟರ್, ಒಳ್ಳೆಯ ಮನೆತನ, ನೋಡಕ್ಕೂ ಚೆನ್ನಾಗಿದ್ದಾನೆ. ಶಾಲಿನಿ ತಾಯಿ ಶಾಂತಮ್ಮ ಹೆಸರಿಗೆ ತಕ್ಕಂತೆ ಶಾಂತವ್ಯಕ್ತಿ. ಶಾಲಿನಿ ತಂದೆ ಶಂಕರಪ್ಪ ಕೂಡ ನಿಧಾನಿ. ನನ್ನ ಮಗಳಿಗೆ ಇದೇ ಮನೆ ಸರಿ ಅನ್ನಿಸಿತ್ತು.

ಅಪೂರ್ವ ನೋಡಲು ಚೆನ್ನಾಗಿದ್ದಳು. ಶಾಲಿನಿಯೂ ತಮ್ಮನನ್ನು ಒತ್ತಾಯ ಮಾಡಿದ್ದಳು.

'ನನಗೆ ಇಷ್ಟು ಬೇಗ ಮದುವೆಯಾಗಲು ಇಷ್ಟವಿಲ್ಲಕ್ಕ.'

'ಎಂಗೇಜ್‌ಮೆಂಟ್ ಮಾಡಿಕೋ. ಇನ್ನೊಂದು ಆರು ತಿಂಗಳು ಬಿಟ್ಟು ಮದುವೆಯಾಗು.'

'ಇಷ್ಟು ಬೇಗ ನಾನ್ಯಾಕೆ ಮದುವೆಯಾಗಬೇಕು?'

'ನೀನು ಬಿ.ಎಸ್ಸಿ. ಮಾಡಿ ಎಂ.ಬಿ.ಬಿ.ಎಸ್. ಮಾಡಿದೆ. ನೀನು ನನಗಿಂತ 2 ವರ್ಷ ಚಿಕ್ಕವನು. ನನಗೆ ಈಗ 28 ವರ್ಷ. ನಿನಗೆ 26 ವರ್ಷ. ಇದೇ ಸರಿಯಾದ ವಯಸ್ಸು ಕಣೋ.'

'ನೀನು ಯಾಕೆ ಬೇಗ ಮದುವೆಯಾಗಲಿಲ್ಲ?'

'ಅಪ್ಪ ರಿಟೈರ್ ಆಗಿದ್ರು. ನೀನು ಓದ್ತಾಯಿದ್ದೆ. ನನ್ನ ಮೇಲೆ ಜವಾಬ್ದಾರಿ ಇತ್ತು. ನಿನಗೀಗ ಯಾವ ಜವಾಬ್ದಾರಿಯಿದೆ?'

'ನಿಮ್ಮ ಅತ್ತೆ ಮನೆಯವರು ಶ್ರೀಮಂತರು. ನಾವು ಅವರ ಸ್ಟೇಟಸ್‌ಗೆ ಸರಿಹೋಗಲ್ಲ.'

'ನಮ್ಮ ಮನೆಯಲ್ಲಿ ಯಾರೂ ಸ್ಟೇಟಸ್ ನೋಡಲ್ಲ. ಪೂರ್ವಿ ಮಗು ತರಹ ಸ್ವಭಾವದ ಹುಡುಗಿ, ಯೋಚಿಸು' ಎಂದಿದ್ದಳು.

ಶಾಲಿನಿ ಮದುವೆಯಾದ ನಾಲ್ಕು ತಿಂಗಳಿಗೆ ಅಪೂರ್ವ ಶಶಾಂಕರ ಎಂಗೇಜ್‌ಮೆಂಟ್ ನಡೆದಿತ್ತು. 'ಈಗ ತಾನೇ ಮಗನ ಮದುವೆ ಆಗಿದೆ. ಸಿಂಪಲ್ ಆಗಿ ಎಂಗೇಜ್‌ಮೆಂಟ್ ಮಾಡುತ್ತೇವೆ' ಎಂದಿದ್ದರು ಗಿರಿಜಮ್ಮ. ಮನೆ ಸಮೀಪದ ಚಿಕ್ಕ ಹಾಲ್‌ನಲ್ಲಿ ಎಂಗೇಜ್‌ಮೆಂಟ್ ನಡೆದಿತ್ತು. ಎಂಗೇಜ್‌ಮೆಂಟ್ ಮೊದಲು ಶಶಾಂಕ ಪೂರ್ವಿಯನ್ನು ಭೇಟಿ ಮಾಡಿ ಹೇಳಿದ್ದ. 'ನಾವು ನಿಮ್ಮಷ್ಟು ಶ್ರೀಮಂತರಲ್ಲ. ನಾನು ನಮ್ಮ ತಂದೆ–ತಾಯಿಯರನ್ನು ಬಿಟ್ಟು ಎಲ್ಲಿಗೂ ಬರಲ್ಲ. ನೀವು ಹೊಂದಿಕೊಳ್ಳಬೇಕು. ಮದುವೆ ಆಗ್ತಿರುವ ಹಾಗೆ ಬೇರೆ ಮನೆ ಮಾಡಿ ಅಂತ ಹಟ ಹಿಡಿಯಬಾರದು. ಜಗಳ, ಕೋಪ, ಮನಸ್ತಾಪ – ಇವು ಯಾವುದೂ ನನಗಿಷ್ಟವಾಗಲ್ಲ.'

'ನಾನು ಹೊಂದಿಕೊಂಡು ಹೋಗ್ತೀನಿ. ಮದುವೆ ಆಗುವುದರೊಳಗೆ ಅಡುಗೆ, ತಿಂಡಿ ಮಾಡುವುದನ್ನು ಕಲಿಯುತ್ತೇನೆ' ಎಂದಿದ್ದಳು ಪೂರ್ವಿ.

ಪ್ರತಿ ಭಾನುವಾರವಲ್ಲದಿದ್ದರೂ ತಿಂಗಳಿಗೆ ಒಂದೆರಡು ಸಲ ಭೇಟಿಯಾಗುತ್ತಿದ್ದರು. ಶಶಾಂಕ್ ಒಂದು ನರ್ಸಿಂಗ್‌ಹೋಂನಲ್ಲಿ ಕೆಲಸ ಮಾಡುತ್ತಿದ್ದ. ಐದು ಗಂಟೆಯ ನಂತರ ಅವನು, ಅವನ ಸ್ನೇಹಿತರು ಸೇರಿ ಅಗ್ರಹಾರದಲ್ಲಿ ಒಂದು ಕ್ಲಿನಿಕ್ ಆರಂಭಿಸಿದ್ದರು. ಶಶಾಂಕ್ ಮಕ್ಕಳ ತಜ್ಞ, ಅವನ ಸಹಪಾಠಿ ಉಮಾ ಸ್ತ್ರೀರೋಗ ತಜ್ಞೆ, ಇನ್ನೊಬ್ಬ ಗೆಳೆಯ ಕಿಶೋರ್ ನರರೋಗ ತಜ್ಞ. ಕಿಶೋರ್ ಹೆಂಡತಿ ನಂದಿತಾ ಕಿಶೋರ್ ಚರ್ಮರೋಗ ತಜ್ಞೆ. ಕ್ಲಿನಿಕ್ ಚೆನ್ನಾಗಿ ನಡೆಯುತ್ತಿತ್ತು. ಭಾನುವಾರ ಬೆಳಿಗ್ಗೆಯೂ ಕ್ಲಿನಿಕ್ ತೆಗೆಯುತ್ತಿದ್ದರು. ಮಧ್ಯಾಹ್ನ ರಜವಿರುತ್ತಿತ್ತು.

ಸಾಯಂಕಾಲ ಕಾಫಿ ಕುಡಿಯುವಾಗ ಗಿರಿಜಮ್ಮ ಹೇಳಿದರು. 'ಪೂರ್ವಿ ಬಂದ ತಕ್ಷಣ ನೀನು ಕ್ಲಾಸ್ ತೊಗೋಬೇಡಪ್ಪ. ನಾನೇ ಅವಳಿಗೆ ಹೇಳ್ತೀನಿ.'

'ಇಲ್ಲಮ್ಮ, ನಾನೇ ಮಾತಾಡ್ತೀನಿ. ನೀನು ಅಪ್ಪ ಇಬ್ಬರೂ ಮಧ್ಯೆ ಬಾಯಿ ಹಾಕಬೇಡಿ. ಮಕ್ಕಳನ್ನು ಕರೆದುಕೊಂಡು ದೇವಸ್ಥಾನಕ್ಕೋ, ಪಾರ್ಕ್‌ಗೋ ಹೋಗಿ ಬನ್ನಿ.'

ಅಪೂರ್ವ ಮನೆಗೆ ಬಂದಾಗ ಆರು ಗಂಟೆಯಾಗಿತ್ತು. ಅನುಪಮಾ ಟಿ.ವಿ. ನೋಡುತ್ತಿದ್ದಳು.

'ಅತ್ತಿಗೆ ಒಂದು ಕಪ್ ಸ್ಟ್ರಾಂಗ್ ಕಾಫಿ' – ಪರ್ಸ್ ಸೋಫಾ ಮೇಲೆ ಎಸೆದು, ಅಲ್ಲೇ ಮಲಗಿ ಕೇಳಿದಳು.

'ನನಗೆ ಬೆಳಿಗ್ಗೆಯಿಂದ ಅಡುಗೆ–ತಿಂಡಿ ಮಾಡಿ ಸಾಕಾಗಿದೆ. ಬೇಕಾದರೆ ನೀನೇ ಮಾಡಿಕೋ.'

'ಅತ್ತಿಗೆ ಹುಷಾರಿಲ್ವಾ?'

'ಅವಳಿಗೆ ಹುಷಾರಿಲ್ಲ. ನೀನೇ ಹೋಗಿ ಕಾಫಿ ಮಾಡಿಕೊಂಡು ಬಾ.'

'ಹೋಗಣ್ಣ, ನನಗೆ ಬೇಜಾರು.'

'ನಿನಗೆ ಅಡುಗೆ–ತಿಂಡಿ ಮನೆಕೆಲಸ ಮಾಡಕ್ಕೆ ಬೇಜಾರು. ಉಳಿದವರು ಬಿಟ್ಟಿ ಬಿದ್ದಿದ್ದಾರಾ?'

'ಅಣ್ಣ...'

'ಕೂತ್ಕೋ. ನಾನು ಮಾತಾಡಬೇಕು.'

ಪೂರ್ವಿ ಸುಮ್ಮನೆ ಅಣ್ಣನ ಎದುರು ಕುಳಿತಳು.

'ಯಾಕೆ ಶಶಾಂಕ್ ಜೊತೆ ಮದುವೆ ಬೇಡಾಂದೆ?'

'ನನಗೆ ಅವರು ಇಷ್ಟವಾಗ್ಲಿಲ್ಲ. ನಾನು ಕರೆದ ಕಡೆ ಬರಲ್ಲ. ಹೋದವಾರ ಅವರ ತಾಯಿ–ತಂದೆ ಯಾವುದೋ ಮದುವೆಗೆ ಹೋಗಿದ್ದರು. ನಾನು ಸಾಯಂಕಾಲ ಐದೂವರೆ ಹೊತ್ತಿಗೆ ಹೋಗಿದ್ದೆ. ಶಶಾಂಕ್ ನನಗೆ ಕಾಫಿ ಮಾಡಕ್ಕೆ ಹೇಳಿದ್ರು. ನನಗೆಷ್ಟು ಬೇಜಾರಾಯ್ತು ಗೊತ್ತಾ?'

'ಅಡುಗೆ ಮಾಡಕ್ಕೆ ಹೇಳಿದ್ದಿದ್ರೆ ಬೇಜಾರು ಮಾಡಿಕೊಳ್ಳಬೇಕಾಗಿತ್ತು. ಕಾಫಿ ಮಾಡಕ್ಕೆ ಏನು ಕಷ್ಟ?'

'ಅದಷ್ಟೇ ಅಲ್ಲ. ಅವರು ತುಂಬಾ ವಿಚಾರದಲ್ಲಿ ನನಗೆ ಬೇಜಾರು ಮಾಡಿದ್ದಾರೆ.'

'ನಿನಗೆ ಕೈಕೊಟ್ಟು ಬೇರೆ ಹುಡುಗಿಯರ ಜೊತೆ ಓಡಾಡ್ತಿದ್ದಾನಾ?'

'ಹಾಗೇನೂ ಮಾಡಿಲ್ಲ. ಹೋದ ಭಾನುವಾರ ನಾನು ಶಶಾಂಕ್ ಮಲ್ಟಿಪ್ಲೆಕ್ಸ್‌ನಲ್ಲಿ ಫಿಲಂಗೆ ಹೋಗಿದ್ದೆವು... ವಾಪಸ್ಸು ಬರುವಾಗ ದಾರಿಯಲ್ಲಿ ಪಾನಿಪೂರಿ ತಿನ್ನೋಣ ಅಂದೆ. ಮಹಾರಾಯ ಒಪ್ಪಲೇ ಇಲ್ಲ. ನಾನು ಡಾಕ್ಟರ್, ಬೀದಿಲಿ ಮಾರುವ ಹಾಳು ಮೂಳು ತಿನ್ನಬೇಡೀಂತ ನನ್ನ ರೋಗಿಗಳಿಗೆ ಹೇಳ್ತಿರ್ತೀನಿ. ಈಗ ನಾನು ತಿಂದ್ರೆ ಚೆನ್ನಾಗಿರತ್ತಾಂತ ಒಂದು ಗಂಟೆ ಭಾಷಣ ಬಿಗಿದರು.'

'ಅದಕ್ಕೆ ಶಶಾಂಕ್ ಬೇಡವಾ?'

'ಒಂದು ದಿನವೂ ನಿನಗೇನಿಷ್ಟಾಂತ ಕೇಳಲ್ಲ. ಒಂದು ಡ್ರೆಸ್ ತೆಗೆದುಕೊಟ್ಟಿಲ್ಲ. ಚೆನ್ನಾಗಿ ಅಲಂಕಾರ ಮಾಡಿಕೊಂಡು ಮುಂದೆ ನಿಂತರೆ ಸನ್ಯಾಸಿ ತರಹ ಕೂತಿರ್ತಾರೆ. ಸಾಯಂಕಾಲಾನೂ ಪೇಷೆಂಟ್ಸ್ ಪೇಷೆಂಟ್ಸ್ ಅಂತಿರ್ತಾರೆ. ಇಂತಹ ವ್ಯಕ್ತೀನ್ನ ಮದುವೆಯಾದ್ರೆ ನಾನು ಸುಖವಾಗಿರಲು ಸಾಧ್ಯಾನಾ? ಶಾಪಿಂಗ್ ಮಾಡಬೇಕು ಬನ್ನಿ ಅಂದ್ರೆ ಅಂಗಡಿ ಮುಂದೆ ನನ್ನನ್ನು ಇಳಿಸಿ ತಾವು ಮೊಬೈಲ್ ನೋಡ್ತಾ ಕಾರ್ ಹತ್ರ ನಿಂತಿದ್ರು. ಅದರ ಬದಲು ಒಳಗೆ ಬಂದು ನನಗಿಷ್ಟವಾದ ಡ್ರೆಸ್ ಆರಿಸಬಹುದಿತ್ತಲ್ವಾ?'

'ಪೂರ್ವಿ ಲೈಫ್ ಅಂದ್ರೆ ಸಿನಿಮಾ ನೋಡೋದು, ಶಾಪಿಂಗ್ ಮಾಡೋದು, ಪಾನಿಪೂರಿ ತಿನ್ನೋದು ಅಂದ್ಕೊಂಡಿದ್ದೀಯಾ? ನಾನು ನಿಮ್ಮಣ್ಣನ ಹೆಂಡತಿ. ನಿಮ್ಮಣ್ಣಾನೂ ಡಾಕ್ಟರ್. ಅವರು ಬೆಳಿಗ್ಗೆ 8.30ಕ್ಕೆ ಮನೆ ಬಿಟ್ಟರೆ ಸಾಯಂಕಾಲ ಬರ್ತಾರೆ. ಪುನಃ 7 ಗಂಟೆಗೆ ಕೆಲವು ನರ್ಸಿಂಗ್‌ಹೋಂಗಳಿಗೆ ಹೋಗ್ತಾರೆ. ನನಗೆ ಎಷ್ಟು ಬೇಜಾರಾಗಿರಬಹುದು. ನೀನೇ ಯೋಚಿಸು. ಶಾಲಿನಿ ಬಿಟ್ಟರೆ ಬೆಳಿಗ್ಗೆ ಅಡುಗೆ–ತಿಂಡಿ ಮಾಡಕ್ಕೆ ನನಗೆ ಯಾರು ಸಹಾಯ ಮಾಡ್ತಾರೆ ನೀನೇ ಹೇಳು.'

'ನಿಮಗೆ ತಾಳ್ಮೆ ಹೆಚ್ಚು.'

'ನಾನು ನಿಮ್ಮಣ್ಣ ಸಿನಿಮಾ, ನಾಟಕಕ್ಕೆ ಹೋಗಿ ಎಷ್ಟು ವರ್ಷಗಳಾಗಿವೆ ಗೊತ್ತಾ? ನಮ್ಮ ಮನೆಯಲ್ಲಿ ನನ್ನನ್ನು ಒಬ್ಬಳೇ ಮಗಳೂಂತ ತುಂಬಾ ಮುದ್ದಿನಿಂದ ಬೆಳೆಸಿದ್ದರು. ವಾರದಲ್ಲಿ ನಾಲ್ಕು ದಿನ ಹೊರಗೆ ಹೋಗಿ ಪಾನಿಪೂರಿ ತಿನ್ನುತ್ತಿದ್ದೆ. ಭಾಷಾಭೇದ ಮಾಡದೆ ಸಿನಿಮಾ ನೋಡ್ತಿದ್ದೆ. ಈಗ ಮಕ್ಕಳಾದ ಮೇಲಂತೂ ನನ್ನ ಕಾಲೇಜು ದಿನಗಳು ಮರೆತೇ ಹೋಗಿವೆ.'

'ಅತ್ತಿಗೆ ಏನೇನೋ ಹೇಳಬೇಡಿ.'

'ನಿಜ ಹೇಳ್ತೀನಿ, ಅಚ್ಯುತನ ಮದುವೆ ಆದಮೇಲೆ ಶಾಲಿನಿ ರಾತ್ರಿ ಚಪಾತಿ–ಪಲ್ಯ ಮಾಡುವ ಕೆಲಸ ವಹಿಸಿಕೊಂಡಿದ್ದಾಳೆ. ಊಟ ಆದ ಮೇಲೆ ತಾನೇ